ಮಾಡುವುದು ಇತ್ಯಾದಿಗಳು ನಡೆಯುತ್ತಿರುತ್ತವೆ. ಎಲ್ಲೇ ಹೋಗಲಿ ಯಾರೇ ಬರಲಿ ಅವರಿಗೆ ಯಾವ ಪರಿವೆಯೂ ಇಲ್ಲ. ತಾವಾಯಿತು ತಮ್ಮ ಫೋನಾಯಿತು ಎಂಬಂತೆ ಇರುತ್ತಾರೆ. ಎಲ್ಲ ಮೇರೆಗಳನ್ನು ಮೀರಿ ಸ್ನೇಹ ಗಳಿಸಿಕೊಳ್ಳುತ್ತಾರೆ. ಕ್ಯಾಂಡಿ ಕ್ರಶ್, ಕ್ಲಾಶ್ ಆಫ್ ಕ್ಲಾನ್ಸ್ ಮುಂತಾದ ಅಂತರ್ಜಾಲ ಆಟಗಳಲ್ಲಿ ತೊಡಗುತ್ತಾರೆ. ಅದಕ್ಕೆಂದೇ ಮೀಸಲಾದ ಜಾಲತಾಣಗಳೂ ಸಾಕಷ್ಟಿವೆ. ತಮ್ಮ ಸ್ನೇಹಿತರ ಮೂಲಕ ಅಂತಹ ಆಟಗಳಲ್ಲಿ ತೊಡಗುತ್ತಾರೆ. ಮುಂದೆ ತಮಗೆ ತಿಳಿಯದ ವ್ಯಕ್ತಿಗಳೊಂದಿಗೂ ಸಂಪರ್ಕ ಇಟ್ಟುಕೊಳ್ಳುತ್ತಾರೆ. ಯಾರನ್ನೋ ಗೆಲ್ಲಿಸುವುದಕ್ಕಾಗಿ ಆಟ ಆಡುತ್ತಾರೆ. ಹೆಚ್ಚಿನ ಪಾಯಿಂಟ್ಸ್ ಪಡೆದೆವೆಂದು ಹೆಮ್ಮೆಯಿಂದ ಬೀಗುತ್ತಾರೆ. ಕ್ರಮೇಣ ಅನೇಕ ಆನ್‌ಲೈನ್ ವ್ಯವಹಾರಗಳಲ್ಲೂ ತೊಡಗುತ್ತಾರೆ. ಇದರ ಮುಂದುವರಿದ ಭಾಗವೇ ಮೇಲೆ ಉಲ್ಲೇಖಿಸಿದ ಘಟನೆ. ಎಷ್ಟೋ ಮಕ್ಕಳು ಸುಳ್ಳು ಪ್ರಾಯ ಹೇಳಿ ಫೇಸ್‌ಬುಕ್ ಅಕೌಂಟ್ ಮಾಡಿಕೊಳ್ಳುತ್ತಾರೆ. ಸಕ್ರಿಯರಾಗಿಬಿಡುತ್ತಾರೆ.

ಎಲ್ಲಾ ವಿದ್ಯಾರ್ಥಿಗಳೂ ಆನ್‌ಲೈನ್ ಬಳಸಿಕೊಂಡು ದಾರಿ ತಪ್ಪುತ್ತಾರೆಂದೋ, ವಿದ್ಯೆಯಲ್ಲಿ ಹಿಂದೆ ಬೀಳುತ್ತಾರೆಂದೋ ಅಲ್ಲ. ಎಷ್ಟೋ ಮಕ್ಕಳು ಸದಾ ಇಂಟರ್‌ನೆಟ್ ಜೊತೆಗಿದ್ದುಕೊಂಡೇ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದವರಿದ್ದಾರೆ. ಆದರೆ ಕೆಲವು ದುರ್ಬಲ ಮನಸ್ಸಿನ ವಿದ್ಯಾರ್ಥಿಗಳು ಆ ಜಾಲಕ್ಕೆ ಸುಲಭವಾಗಿ ಒಳಗಾಗುತ್ತಾರೆ. ಅದು ಕುತೂಹಲ ಉಕ್ಕಿ ಹರಿಯುವ ವಯಸ್ಸು ಬೇರೆ. ಬಳಿಕ ಅಲ್ಲಿಂದ ಹೊರಬರಲಾಗದೆ, ಯಾರಲ್ಲೂ ಹೇಳಿಕೊಳ್ಳಲಾಗದೆ ಚಡಪಡಿಸುತ್ತಾರೆ. ಅನೇಕ ಮಕ್ಕಳು ಮಾನಸಿಕ ಖಿನ್ನತೆಗೂ ಜಾರುವುದಿದೆ.

### ಸಂವಹನದ ಸಮಸ್ಯೆ

ಇನ್ನೂ ಕೆಲವು ವಿದ್ಯಾರ್ಥಿಗಳಿದ್ದಾರೆ. ಪರೀಕ್ಷೆಯ ಸಂದರ್ಭದಲ್ಲಿ ಅವರು ಅತಿಜಾಣರು. ಫೋನ್, ಕಂಪ್ಯೂಟರ್, ಇಂಟರ್‌ನೆಟ್ ಎಲ್ಲವನ್ನೂ ನಿಲ್ಲಿಸಿ ಓದಿನ ಕಡೆಗೇ ಹೆಚ್ಚಿನ ಗಮನ ಕೊಟ್ಟು ಉತ್ತಮ ಅಂಕ ಗಳಿಸುತ್ತಾರೆ. ಹೆತ್ತವರಿಗೂ ಖುಷಿ. ಮೊಬೈಲ್‌ನಲ್ಲಿ ಎಷ್ಟಾದರೂ

## ಪೋಷಕರು ಏನು ಮಾಡಬೇಕು?

- ಮಕ್ಕಳ ಅಂತರ್ಜಾಲ ಬಳಕೆಯ ಬಗೆಗೆ ನಿಗಾ ವಹಿಸುವುದು ಅತ್ಯಂತ ಅಗತ್ಯ.
- ಅಂತರ್ಜಾಲ ಬಳಕೆಗೆ ಸಮಯ ನಿಗದಿಗೊಳಿಸಬೇಕು.
- ಪ್ರತಿ ಹಂತದಲ್ಲೂ ಮಕ್ಕಳನ್ನು ಸಂಶಯದಿಂದ ಕಾಣುವುದು ಒಳ್ಳೆಯ ನಡವಳಿಕೆ ಅಲ್ಲದೇ ಹೋದರೂ ಮಕ್ಕಳನ್ನು ಸಂಪೂರ್ಣ ನಂಬುವುದೂ ಅಷ್ಟು ಒಳ್ಳೆಯದಲ್ಲ.
- ಅಶ್ಲೀಲ ವೆಬ್‌ಸೈಟ್‌ಗಳನ್ನು ನೋಡುವ ಹವ್ಯಾಸವಿದ್ದಲ್ಲಿ ಮಕ್ಕಳಿಗಾಗಿ ಅದರಿಂದ ಹಿಂದೆ ಸರಿಯಲೇ ಬೇಕು.
- ಅತ್ಯಂತ ಹೆಚ್ಚು ಸಾಮರ್ಥ್ಯದ ಫೋನ್ ಸೆಟ್‌ಗಳನ್ನು ಮಕ್ಕಳಿಗಾಗಿ ಖರೀದಿಸಬಾರದು.
- ಮಕ್ಕಳು ಮೊಬೈಲ್ ಅಥವಾ ಕಂಪ್ಯೂಟರನ್ನು ತಮ್ಮ ಓದುವ ಕೋಣೆಯಲ್ಲಿ ಮಲಗುವ ಕೋಣೆಯಲ್ಲಿ ಇರಿಸಿಕೊಳ್ಳದಂತೆ ನೋಡಿಕೊಳ್ಳಬೇಕು. ಕಂಪ್ಯೂಟರನ್ನು ಡೈನಿಂಗ್ ಹಾಲ್ ಅಥವಾ ವೆರಾಂಡದಲ್ಲಿ ಇರಿಸಿದರೆ ಉತ್ತಮ.
- ಮಗು ಇಂಟರ್‌ನೆಟ್ ಬಳಸುತ್ತಿದ್ದಲ್ಲಿ ಆತನ ನಡವಳಿಕೆಯ ಕಡೆಗೆ ಗಮನವಿರಲೇಬೇಕು. ಆತನ ಸ್ನೇಹಿತರ ವಲಯದ ಪರಿಚಯವಿರಬೇಕು.
- ಪೋಷಕರು ಮೊಬೈಲ್, ಇಂಟರ್‌ನೆಟ್ ದಾಸರಾಗಬಾರದು. ಹಾಗಾದಲ್ಲಿ ಮಗುವಿಗೆ ನಿಯಂತ್ರಣ ಹೇರುವ ನೈತಿಕ ಮೌಲ್ಯವನ್ನು ನಾವು ಕಳೆದುಕೊಂಡಿರುತ್ತೇವೆ.
- ಮಕ್ಕಳಿಗೆ ಇಂಟರ್‌ನೆಟ್ ಬಳಸುವ ಸಂದರ್ಭದಲ್ಲಿ ವಹಿಸಬೇಕಾದ ಜಾಗ್ರತೆ, ತಮ್ಮ ಖಾಸಗಿತನದ ರಕ್ಷಣೆಯ ಅಗತ್ಯದ ಬಗೆಗೆ ಮಾಹಿತಿ ತಿಳುವಳಿಕೆ ನೀಡಬೇಕು.
- ಸೈಬರ್ ಕಾನೂನುಗಳ ಬಗ್ಗೆ ಮಕ್ಕಳಲ್ಲಿ ಪ್ರಾಥಮಿಕ ತಿಳಿವಳಿಕೆ ಮೂಡಿಸಬೇಕು.

